ಟಾಕೀಸಿನಲ್ಲಿ ಪ್ರತಿದಿನ ರಾತ್ರಿಯ ಆಟಕ್ಕೆ ಕಕ್ಕಪ್ಪನ ಜೊತೆ ಕಕ್ಕಪ್ಪನ ಪ್ರೀತಿಯ ಮೋನಾ ಮೋಹನನ ಟಿಕೇಟೂ ಕಾಯಂ ಆಗಿರುತ್ತಿತ್ತು. ಕಕ್ಕಪ್ಪ ರವಿಚಂದ್ರನ್‌ನ ದೊಡ್ಡ ಅಭಿಮಾನಿ. ಪ್ರೇಮಲೋಕ, ರಣಧೀರ, ಹಳ್ಳಿಮೇಷ್ಟ್ರು, ಅಣ್ಣಯ್ಯ, ಮನೆದೇವ್ರು, ಶ್ರೀರಾಮಚಂದ್ರ, ರಾಮಾಚಾರಿ, ಪುಟ್ನಂಜ, ಸಿಪಾಯಿ, ಚೆಲುವ, ಯಾರೇ ನೀನು ಚೆಲುವೆ ಸಿನಿಮಾಗಳನ್ನು ಲೆಕ್ಕವಿಡಲಾಗದಷ್ಟು ಸಲ ನೋಡಿದ್ದ. ಅವುಗಳ ಪದಕ್ಕೆ ಪದ, ದೃಶ್ಯಕ್ಕೆ ದೃಶ್ಯ ಇದ್ದದ್ದು ಇದ್ದ ಹಾಗೆಯೇ ಕಂಠಪಾಠ ಮಾಡಿದ್ದ. ಅವನು ನೋಡಿದ ಸಿನಿಮಾಗಳು ಅವನ ಬಾಯಿಂದ ಇನ್ನೂ ರಸವತ್ತಾಗಿ ಬರುತ್ತಿದ್ದ ಈ ಹುಚ್ಚು ತಿಳಿದವರು, 'ಅಲ್ಲಲ್ಲೇ ರಮೇಶಾ, ಒಂದೇ ಪಿಚ್ಚರ್ರುನ್ನ ಇಪ್ಪ್ ಇಪ್ಪತ್ತ್ ಸಲೀ ನೋಡ್ತಿಯಲ್ಲಾ ಬ್ಯಾಸ್ರಾ ಆಗಲ್ಲೇನಲೇ ನಿಮ್ಮವ್ವನಾ?' ಎಂದು ಗದರಿಸಿದರೆ ರಮೇಶ, 'ಬ್ಯಾಸ್ರಾದ್ರೆ ಅದೇ ಸಿನುಮಾನ್ನ ಇನ್ನೊಂದ್ ಸಲಿ ನೋಡಿದ್ರೆ ಆಯ್ತು ಅಷ್ಟೇ' ಎಂದು ಥೇಟ್ ರವಿಚಂದ್ರನ್ನಿನಂತೆ ನಗುತ್ತಿದ್ದ.

ಕಷ್ಟ ಬಂದಾಗ ರಮೇಶ, 'ಸ್ವಾಮೀ... ಸಿದ್ದಲಿಂಗೇಶ್ವರಾ... ಕಾಪಾಡಪ್ಪಾ' ಎಂದು ಮನೆದೇವ್ರನ್ನು ನೆನಯುತ್ತಿದ್ದ. 'ಸಿದ್ದಲಿಂಗೇಶ್ವರ' ಎಂಬುದು ಊರ ಟಾಕೀಸಿನ ಹೆಸರೂ ಆಗಿತ್ತು. ಸುತ್ತಲಿನ ನಾಲ್ಕೈದು ಊರುಗಳಿಗೆ ಅದೊಂದೇ ಟಾಕೀಸು. ಐದು ರುಪಾಯಿಗೆ ಬೆಂಚು, ಮೂರು ರುಪಾಯಿಗೆ ಮಣ್ಣಿನ ಜಾಗ, ಅಷ್ಟೇ ಇದ್ದಿದ್ದು ಅಲ್ಲಿ. ರಾತ್ರಿಯ ಹೊತ್ತಿಗೆ ಹೇಗೋ ದುಡ್ಡು ಹೊಂದಿಸಿಕೊಂಡು ಒಳಗೆ ಹೋಗಿ ಕುಂತ ಮೇಲೆ ಮುಗಿಯಿತು ಆ ಸಿನಿಮಾ ಅದು ಎಷ್ಟನೇ ಬಾರಿಯಾದರೂ ಮೊದಲ ಬಾರಿ ನೋಡಿದ್ದಾಗ ಆದ ಆನಂದವೇ ರಮೇಶನಿಗೆ ಆಗುತ್ತಿತ್ತು.

ರಮೇಶ ಸಿಪಾಯಿ ಸಿನಿಮಾ ನೋಡಿದ ಮೇಲೆ ಹೆಗಲಿಗೊಂದು ಟವಲ್ಲು ಹಾಕಿಕೊಂಡು 'ಯಾರಿಗೆ ಬೇಕೂ ಈ ಲೋಕ?' ಎಂದು ಗಾಯನ ಶುರು ಮಾಡಿ ಬಾಯಿಗೆ ಬೀಡಿ ಇಟ್ಟುಕೊಳ್ಳಲು ಹೋಗಿ ತನ್ನವ್ವನಿಂದ ಕಸಬರಿಗೆ ಏಟು ತಿಂದಿದ್ದ. ಮರುವರ್ಷ 'ತಪ್ಪಾ? ಪ್ರೀತ್ಸೋದ್ ತಪ್ಪಾ?' ಎಂದು ಜೋರಾಗಿ ಹಾಡಿಕೊಂಡು ಹೋಗುತ್ತಿರುವಾಗ ಗೌಡರ ಹುಡುಗಿಯರಿಬ್ಬರಿಂದ 'ಯಾಕಲೇ ಬೋಸುಡಿಕೇ, ಮುಕುಳ್ಯಾಗ ಕಡೀತಾವೇನು?' ಎಂದು ಉಗಿಸಿಕೊಂಡು 'ಯಾಕ್ ಬೈದ್ರು?' ಎಂದು ಆಶ್ಚರ್ಯಗೊಂಡಿದ್ದ.

ಮುಂದೆ 'ಏಕಾಂಗಿ ಒನ್ ಅಂಡ್ ಓನ್ಲಿ' ಅನ್ನೋ ಸಿನಿಮಾ ಬಂದಾಗ ರಮೇಶ ಭಯಂಕರ ಖುಷಿಯಾಗಿಬಿಟ್ಟ. ಜನರಿಗೆ ಹಿಡಿಸದ ಸಿನಿಮಾದಲ್ಲಿ ಆತನಿಗೆ ಯಾವುದೋ ತತ್ವ ಕಂಡಿತ್ತು. ಪ್ರತಿದಿನ ನೋಡಿದ ಆ ಸಿನಿಮಾ ರಮೇಶನಿಗೆ ಅದರಲ್ಲಿನ ರವಿಚಂದ್ರನ್‌ನಂತೆ ಎಲ್ಲರೊಂದಿಗೆ ಮಾತು ಬಿಡುವಷ್ಟು ಮತ್ತು ಒಬ್ಬೊಬ್ಬನೇ ಇರುವಷ್ಟು ಪ್ರಭಾವಿಸಿತು. ಮನೆಯವರು ಗಾಬರಿಯಾಗಿ ಗದರಿಸಿದರು, ರಮೇಶ ಬಾಯಿ ಬಿಡಲಿಲ್ಲ. ತಿಂಗಳುಗಳು ಕಳೆದು ಹೂವು, ಬಣ್ಣ, ಪ್ರೀತಿ ಪ್ರೇಮ, ದ್ವೇಷ ಕರುಣೆಯ ರವಿಚಂದ್ರನ್‌ನ ಹೊಸಾ ಸಿನಿಮಾ 'ಮಲ್ಲ' ಬಂದು ಭಯಂಕರ ಹಿಟ್ಟಾಗಿ ಓಡುತ್ತಿದ್ದರೂ ರಮೇಶ ಟಾಕೀಸಿನ ಕಡೆಗೆ ಸುಳಿಯದೇ ಇನ್ನೂ ಏಕಾಂಗಿಯಾಗೇ ಉಳಿದಿದ್ದ. ಕೊನೆಗೊಂದು ದಿನ ಕಾಣೆಯಾಗಿಬಿಟ್ಟ. ಮನೆಯವರ ಹುಡುಕಾಟ, ಪೊಲೀಸು ಕಂಪ್ಲೇಂಟು ಸಹ ಅವನನ್ನು ಹುಡುಕಿ ಕೊಡಲಿಲ್ಲ. ಎಲ್ಲರೂ ರಮೇಶನ ಆಸೆ ಬಿಟ್ಟರು. ವಿಷಯ ತಿಳಿದ ಮೋಹನನಿಗೆ ಬೇಜಾರಾಯಿತು.

ಕಕ್ಕಪ್ಪ ಪಕ್ಕದಲ್ಲಿ ಇಲ್ಲದ ಮುಂದಿನ ವರ್ಷ ಮೋಹನನಿಗೆ ಸಿದ್ದಲಿಂಗೇಶ್ವರನಲ್ಲಿನ ಒಂದು ಸಿನಿಮಾ ಕೂಡ ಹಿಡಿಸಲಿಲ್ಲ. ಮೋಹನನ ಸಿನಿಮಾ ಹುಚ್ಚಿಗಿಂತ ಅವನ ಹಾವಭಾವದ ಮನೆಯವರೆಲ್ಲರೂ ಅಸಮಾಧಾನ ಹೊಂದಿದರು. 'ಹುಡ್ಗುರಂಗ ಇರಲೇ' ಎಂದು ಅಪ್ಪ ಆಜ್ಞೆ